ಇ ಮೇಲ್: kajavivi@gmail.com
ಗೊಟಗೋಡಿ ಕಛೇರಿ ದೂರವಾಣಿ: 0836-2255180
ಫ್ಯಾಕ್ಸ್: 0836-2307402

# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

**ಗೊಟಗೋಡಿ, ರಾಷ್ಟ್ರೀಯ ಹೆದ್ದಾರಿ -4, ಶಿಗ್ಗಾವಿ ತಾ. ಹಾವೇರಿ ಜಿ. - 581 205**

ಕಜಾವಿವಿ/ಆವಿ/ಕ್ರಮಾಂಕ:2022-23/682

**ಕುಲಸಚಿವರು** **ದಿನಾಂಕ:19.01.2023**

## ಅಧಿಸೂಚನೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ 2022-23ನೇ ಶೈಕ್ಷಣಿಕ ಸಾಲಿನಲ್ಲಿ ವಿಸ್ತರಣಾ ಹಾಗೂ ಸಲಹಾ ಕೇಂದ್ರ ಪ್ರಾದೇಶಿಕ ಅಧ್ಯಯನ ಕೇಂದ್ರಗಳು ಹಾಗೂ ಗ್ರಾಮ ಕರ್ನಾಟಕ ವಸ್ತುಸಂಗ್ರಹಾಲಯದಲ್ಲಿ ಹಾಗೂ ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಕಲಿಕಾ ಕೇಂದ್ರ, ಮೈಸೂರು ಇಲ್ಲಿ ತಾತ್ಕಾಲಿಕ ಸಂಯೋಜನಾಧಿಕಾರಿ ಹಾಗೂ ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರಗಳಾದ ಬೀದರ್, ಜೋಯಿಡಾ, ಮೈಸೂರು, ಮಂಡ್ಯ ಹಾಗೂ ಮಲೆಮಹದೇಶ್ವರ ಬೆಟ್ಟ ಇಲ್ಲಿ ತಾತ್ಕಾಲಿಕ ಯೋಜನಾ ಸಹಾಯಕರ ಸೇವೆ ಸಲ್ಲಿಸಲು ತಾತ್ಕಾಲಿಕವಾಗಿ ನಿಯೋಜನೆ ಆಧಾರದ ಮೇಲೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ **ದಿನಾಂಕ30-01-2023ರ ಸಂಜೆ 5:30** ರೊಳಗಾಗಿ **ಮಾನ್ಯ ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ,** ಶಿಗ್ಗಾವಿಯ ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ವೆಬ್‌ಸೈಟ್ www.janapadauniversity.ac.in ನ್ನು ಗಮನಿಸಲು ಈ ಮೂಲಕ ಸೂಚಿಸಿದೆ.

19/1/23

**ಕುಲಸಚಿವರು**

# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

**ಗೊಟಗೋಡಿ, ರಾ. ಹೆ. –4, ಶಿಗ್ಗಾವಿ ತಾ. ಹಾವೇರಿ ಜಿ. – 581 205**

## ಜಾಹೀರಾತು

**ಕಜಾವಿವಿ/ಆವಿ/2022–23/** 682 **ದಿನಾಂಕ: 19.01.2023**

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಪ್ರಸ್ತುತ ಶೈಕ್ಷಣಿಕ ವರ್ಷ 2022–23ನೇ ಸಾಲಿನಲ್ಲಿ ವಿಸ್ತರಣೆ ಹಾಗೂ ಸಲಹಾ ಕೇಂದ್ರ, ಗ್ರಾಮ ಕರ್ನಾಟಕ ಬಯಲು ವಸ್ತುಸಂಗ್ರಹಾಲಯ ಹಾಗೂ ಪ್ರಾದೇಶಿಕ ಅಧ್ಯಯನ / ಸ್ನಾತಕೋತ್ತರ ಕೇಂದ್ರಗಳಲ್ಲಿ ಸೇವೆ ಸಲ್ಲಿಸಲು ತಾತ್ಕಾಲಿಕ ನಿಯೋಜನೆ ಆಧಾರದ ಮೇಲೆ ಈ ಕೆಳಕಂಡಂತೆ ನಿಗದಿಪಡಿಸಿದ ಅರ್ಹತೆ ಹೊಂದಿದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

**1. ತಾತ್ಕಾಲಿಕ ಸಂಯೋಜನಾಧಿಕಾರಿ – 01**

| ಕ್ರ.ಸಂ. | ಕೇಂದ್ರ/ವಿಭಾಗ | ವಿದ್ಯಾರ್ಹತೆ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರ, ಮೈಸೂರು | ಜಾನಪದ / ಕನ್ನಡ / ಮಾನವ ಶಾಸ್ತ್ರ ಅಥವಾ ಪೂರಕ ಜ್ಞಾನಶಿಸ್ತುಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. ಜಾನಪದ ಕ್ಷೇತ್ರದಲ್ಲಿ ಸಂಶೋಧನಾ ಅನುಭವ ಹೊಂದಿರಬೇಕು ಮತ್ತು ಪುಸ್ತಕಗಳನ್ನು ಪ್ರಕಟಿಸಿರಬೇಕು ಹಾಗೂ ಕಲಾ ಅನುಭವ ಹೊಂದಿರಬೇಕು. ಆಡಳಿತ ಅನುಭವ ಅಗತ್ಯ. | 01 |

**2. ತಾತ್ಕಾಲಿಕ ಯೋಜನಾ ಸಹಾಯಕರು – 09**

| ಕ್ರ.ಸಂ. | ಕೇಂದ್ರ/ವಿಭಾಗ | ವಿದ್ಯಾರ್ಹತೆ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಮಲೆಮಹದೇಶ್ವರ ಬೆಟ್ಟ, ಜೋಯಿಡಾ, ಮೈಸೂರು, ಮಂಡ್ಯ ಹಾಗೂ ಬೀದರ್‌ನ ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರಗಳು | ಜಾನಪದ ಅಥವಾ ಪೂರಕ ಜ್ಞಾನಶಿಸ್ತುಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 05 |
| 2 | ವಿಸ್ತರಣೆ ಹಾಗೂ ಸಲಹಾ ಕೇಂದ್ರ | ಜಾನಪದ ಅಥವಾ ಪೂರಕ ಜ್ಞಾನಶಿಸ್ತುಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 02 |
| 3 | ಗ್ರಾಮ ಕರ್ನಾಟಕ ವಸ್ತುಸಂಗ್ರಹಾಲಯ | ಜಾನಪದ ಅಥವಾ ಪೂರಕ ಜ್ಞಾನಶಿಸ್ತುಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 02 |

**ಸೂಚನೆ:** ಮೇಲ್ಕಂಡಂತೆ ವಿದ್ಯಾರ್ಹತೆಯನ್ನು ಪಡೆದಿರುವ ಹಾಗೂ ಸೇವಾನುಭವವನ್ನು ಹೊಂದಿರುವ ಅರ್ಹ ಅಭ್ಯರ್ಥಿಗಳು ಸ್ವವಿವರ ಹಾಗೂ ಅಗತ್ಯ ಎಲ್ಲ ಪೂರಕ ದಾಖಲೆಗಳೊಂದಿಗೆ **ದಿನಾಂಕ: 30-01-2023 ರ ಸಂಜೆ 5:30 ರೊಳಗೆ** ಅರ್ಜಿ ಸಲ್ಲಿಸತಕ್ಕದ್ದು. **ಸಂಯೋಜನಾಧಿಕಾರಿ ಹುದ್ದೆಗೆ** ಸಾಮಾನ್ಯ ವರ್ಗದ ಅಭ್ಯರ್ಥಿಗಳು ರೂ. **1500/–(ರೂ. ಒಂದು ಸಾವಿರದ ಐದು ನೂರು ಮಾತ್ರ)** ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು **ರೂ. 1,000/– (ರೂ. ಒಂದು ಸಾವಿರ ಮಾತ್ರ)** ಗಳ ಶುಲ್ಕವನ್ನು ಹಾಗೂ **ಯೋಜನಾ ಸಹಾಯಕರ ಹುದ್ದೆಗೆ** ಸಾಮಾನ್ಯ ವರ್ಗ ಅಭ್ಯರ್ಥಿಗಳು ರೂ. **1000/– (ರೂ. ಒಂದು ಸಾವಿರ ಮಾತ್ರ)** ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು **ರೂ. 500/– (ರೂ. ಐದು ನೂರು ಮಾತ್ರ) ಗಳ** ಶುಲ್ಕವನ್ನು ಶಿಗ್ಗಾವಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗೆ ಪಾವತಿಯಾಗುವಂತೆ ಡಿ.ಡಿ.ಯನ್ನು **'ಹಣಕಾಸು ಅಧಿಕಾರಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ'** ಇವರ ಹೆಸರಿಗೆ ಪಡೆದು ಅರ್ಜಿಯನ್ನು **ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ** ಇವರಿಗೆ ಸಲ್ಲಿಸಬಹುದಾಗಿದೆ.

ವಿಶೇಷ ಸೂಚನೆ:
(1) ಯುಜಿಸಿ ನಿಯಮಾವಳಿಯಂತೆ ನೇಮಕಾತಿ ಮಾಡಲಾಗುವುದು.
(2) ಅಗತ್ಯಕ್ಕನುಗುಣವಾಗಿ ಹುದ್ದೆಗಳ ಸಂಖ್ಯೆ ಹೆಚ್ಚು–ಕಡಿಮೆ ಮಾಡಿಕೊಳ್ಳಲಾಗುವುದು.
(3) NET/SLET/M.PHIL/ PH.D ಮತ್ತು ಬೋಧನೆ / ಸಂಶೋಧನಾ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.
(4) ಸಂಯೋಜನಾಧಿಕಾರಿ ಆಯ್ಕೆಗೆ ಸಂಬಂಧಿಸಿದಂತೆ ಸ್ನಾತಕೋತ್ತರ ಕೇಂದ್ರಗಳಲ್ಲಿ ನಡೆಯುವ ಕೋರ್ಸುಗಳ ಶಿಸ್ತಿನವರಿಗೆ ಮೊದಲ ಆದ್ಯತೆ ನೀಡಲಾಗುವುದು.
(4)ಆಯ್ಕೆಯಾದ ತಾತ್ಕಾಲಿಕ ಸಂಯೋಜನಾಧಿಕಾರಿ ಹುದ್ದೆಯ ಹಾಗೂ ತಾತ್ಕಾಲಿಕ ಯೋಜನಾ ಸಹಾಯಕರು ವಿಶ್ವವಿದ್ಯಾಲಯವು ನಿಯೋಜಿಸುವ ಸ್ಥಳಗಳಲ್ಲಿ ಕಾರ್ಯನಿರ್ವಹಿಸುವುದು ಕಡ್ಡಾಯವಾಗಿದೆ.
(5) ಮೇಲ್ಕಂಡ ಹುದ್ದೆಗಳನ್ನು ಸರ್ಕಾರದ ಮೀಸಲಾತಿಯನುಸಾರ ಭರ್ತಿ ಮಾಡಲಾಗುವುದು.

ಆದೇಶದ ಮೇರೆಗೆ,

ಕುಲಸಚಿವರು
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ